ವಿಜಯ ಕರ್ನಾಟಕ

# ಕೈಗಾ ವಿಸ್ತರಣೆ: ಪರಿಸರ ಸಮಾವೇಶಕ್ಕೆ ಸಜ್ಜು

ವಿಕ ಸುದ್ದಿಲೋಕ | Jun 25, 2017, 05.00 AM IST

**ಶಿರಸಿ**:ಕೈಗಾ ಅಣುವಿದ್ಯುತ್ ಸ್ಥಾವರದ 5-6 ನೇ ಘಟಕ ವಿಸ್ತರಣೆ ಕೈಬಿಡಬೇಕು ಎಂದು ಆಗ್ರಹಿಸಿ ಯಲ್ಲಾಪುರ ಟಿಎಂಎಸ್ ಸಭಾಂಗಣದಲ್ಲಿ ಬೃಹತ್ ಪರಿಸರ ಸಮಾವೇಶ ಜೂ.25ರಂದು ಬೆಳಗ್ಗೆ 10.30ಕ್ಕೆ ಏರ್ಪಡಿಸಲಾಗಿದೆ.

ಸೋಂದಾ ಸ್ವರ್ಣವಲ್ಲಿ ಸಂಸ್ಥಾನದ ಶ್ರೀಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿಯವರು ಪ್ರಾರಂಭವಾಗುವ ಸಮಾವೇಶದ ಸಾನ್ನಿಧ್ಯ ವಹಿಸುವರು ಜಿಲ್ಲೆಯ ಎಲ್ಲ ಶಾಸಕರನ್ನು ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಪರಿಸರ ಸಂರಕ್ಷ ಣಾ ಸಮಿತಿ ತಿಳಿಸಿದೆ.

ನಾಡಿನ ವಿವಿಧೆಡೆಯ ಪರಿಸರ ತಜ್ಞರನ್ನು ಆಹ್ವಾನಿಸಲಾಗಿದ್ದು ಇಂಧನ ತಜ್ಞ ಶಂಕರ ಶರ್ಮಾ ಮೈಸೂರು, ಡಾ. ವಿಷ್ಣು ಕಾಮತ ಬೆಂಗಳೂರು, ನಾಗೇಶ ಹೆಗಡೆ, ಡಾ. ವೈ.ಬಿ. ರಾಮಕೃಷ್ಣ, ಟಿ. ವಿ. ರಾಮಚಂದ್ರ, ಪ್ರೊ. ಬಿ. ಎಂ. ಕುಮಾರ ಸ್ವಾಮಿ ಮುಂತಾದವರು ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ ನಡೆಯುವ ಗೋಷ್ಠಿಗಳಲ್ಲಿ ಕೈಗಾ ಆರೋಗ್ಯ ಸಮೀಕ್ಷೆ, ನೆಲ, ಜಲ, ಜಾನುವಾರು, ವನ್ಯ ಜೀವಿಗಳ ಮೇಲೆ ಅಣುವಿಕಿರಣದ ಪರಿಣಾಮಗಳು ಕುರಿತು ಚರ್ಚಿಸಲಾಗುತ್ತಿದೆ. ಕೃಷಿ ಬದುಕಿನ ಮೇಲೆ ಆಗುತ್ತಿರುವ ದುಷ್ಪರಿಣಾಮಗಳು. ಕೈಗಾ ಸುತ್ತಲಿನ ಹಳ್ಳಿಗಳ ಜನರ ಅತಂತ್ರಬದುಕಿನ ಪರಿಸ್ಥಿತಿ, ಮುಂತಾದ ಜ್ವಲಂತ ಪರಿಸ್ಥಿತಿ ಬಗ್ಗೆ ಸಮಾಲೋಚನೆ ನಡೆಯಲಿದೆ. ಕೈಗಾ ಅಣುವಿದ್ಯುತ್ ಉತ್ಪಾದನೆಯ ಆರ್ಥಿಕ ವಿಚಾರ, ಸೋಲಾರ್ ವಿದ್ಯುತ್ ಸೇರಿದಂತೆ ಬದಲೀ ವಿದ್ಯುತ್ ಮೂಲಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಪರಿಸರ ಹಾಗೂ ರೈತ ಸಂಘಟನೆಗಳು, ಸಹಕಾರಿ ಪ್ರಮುಖರು, ವೈದ್ಯರು, ಮಹಿಳಾ ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಸಮಾವೇಶಕ್ಕೆ ಪೂರಕವಾಗಿ ಈಗಾಗಲೇ ಯಲ್ಲಾಪುರ ಮತ್ತು ಶಿರಸಿಯಲ್ಲಿ ಸ್ವರ್ಣವಲ್ಲೀ ಸ್ವಾಮೀಜಿ ಅಧ್ಯಕ್ಷ ತೆಯಲ್ಲಿ ತಯಾರಿ ಸಭೆ ನಡೆದಿವೆ. ವಜ್ರಳ್ಳಿ, ಮಲವಳ್ಳಿ, ಗುಂದ, ಉಮಚಗಿ, ಹೇರೂರು, ಕುಮಟಾ, ಅಂಕೋಲಾ ಮುಂತಾದ ಸ್ಥಳಗಳಲ್ಲಿ ಸಮಾವೇಶ ಪೂರ್ವ ಸಂಪರ್ಕ ಸಭೆಗಳು ನಡೆದಿದ್ದು ಜನ ಸಂಪರ್ಕ ಅಭಿಯಾನ ನಡೆಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಪ್ರಶ್ನೆಗಳಿಗೆ ಉತ್ತರವಿಲ್ಲ** : ಈಗಾಗಲೇ ಬೃಹತ್ ಯೋಜನೆಗಳಿಂದ ಉಕ ಜಿಲ್ಲೆಯ ಪರಿಸರ ಧಾರಣಾ ಸಾಮರ್ಥ್ಯ ಮುಗಿದಿದೆ ಎಂದು ವಿಜ್ಞಾನಿಗಳು ವರದಿ ನೀಡಿದ್ದಾರೆ. ಕೈಗಾದಿಂದ ಇನ್ನೊಂದು ವಿದ್ಯುತ್ ಮಾರ್ಗ ನಿರ್ಮಾಣವಾದರೆ ಒಂದು ಲಕ್ಷ ಮರ ಕಡಿತವಾಗುತ್ತದೆ. ಅಣುಸ್ಥಾವರ ಸ್ಥಾಪನೆ ನಂತರದಲ್ಲಿ ಕೈಗಾ ಸುತ್ತ ವ್ಯಾಪಕವಾಗಿ ಕ್ಯಾನ್ಸರ್ ಮತ್ತಿತರ ಕಾಯಿಲೆ ಹೆಚ್ಚಿದ ಬಗ್ಗೆ ವ್ಯಾಪಕ ದೂರುಗಳಿವೆ. ಕೈಗಾ ಸುತ್ತಲಿನ 5 ಕಿಮೀ ವ್ಯಾಪ್ತಿಯ ಜನರಿಗೆ ಪುನರ್ ವಸತಿ ನೀಡಿ ಎಂಬ ಬೇಡಿಕೆ ಈಡೇರಿಲ್ಲ. ಅಣುತ್ಯಾಜ್ಯವನ್ನು ಎಲ್ಲಿ ಹೂಳುತ್ತಿದ್ದೀರಿ? ಎಲ್ಲಿಗೆ ಸಾಗಾಟ ಮಾಡಲಾಗುತ್ತದೆ? ಎಂಬ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ ಇವೆಲ್ಲ ಕಾರಣದಿಂದ ಕೈಗಾ ಘಟಕಗಳ ವಿಸ್ತರಣೆಗೆ ವಿರೋಧ ವ್ಯಕ್ತಪಡಿಸಿ ಸಮಾವೇಶ ಸಂಘಟಿಸಲಾಗಿದೆ ಎಂದು ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷ ಣಾ ಸಮೀತಿ ಮತ್ತು ಜಿಲ್ಲಾ ಪರಿಸರ ಸಂರಕ್ಷ ಣಾ ಸಮಿತಿ ಪ್ರಮುಖರು ತಿಳಿಸಿದ್ದಾರೆ.